◆ **ನೀವು ಹಲವು ದೇಶಗಳನ್ನು ಸುತ್ತಾಡಿದ್ದೀರಿ. ನೀವು ದಲಿತ ಮಸೂರದಿಂದ ಜಗತ್ತನ್ನು ನೋಡುವಾಗ ಅಲ್ಲಿಯದಕ್ಕೂ – ಇಲ್ಲಿಯದಕ್ಕೂ ಯಾವ ಬಗೆಯ ಸಮಾನತೆಯನ್ನು ಕಾಣುತ್ತೀರಿ?**

ಆರಂಭದಲ್ಲಿ ನಾವು ಬರೆಯುವಾಗ 'ಮಹಾರರು' ತಮ್ಮ ವ್ಯಥೆಯನ್ನು ತೋಡಿಕೊಳ್ಳುತ್ತಿದ್ದಾರೆ ಎಂದು ಭಾವಿಸಲಾಗುತ್ತಿತ್ತು. ಅಂದರೆ, ದಲಿತ ಬರಹ ಕೇವಲ ಒಂದು ಜಾತಿಗೆ ಮಾತ್ರ ಸೀಮಿತವಾಗಿತ್ತು. ಉದಾ: ಆಸ್ಟ್ರೇಲಿಯಾಕ್ಕೆ ಬಿಳಿಯರು ಹೋಗಿ ಅಲ್ಲಿನ ಭೂಮಿಯನ್ನು ವಶಪಡಿಸಿಕೊಂಡಾಗ, ಅಲ್ಲಿನ ಮೂಲ ನಿವಾಸಿಗಳು ಅಲ್ಲಿಂದ ಪಲಾಯನ ಮಾಡಬೇಕಾಯಿತು. ಆ ಮೂಲ ನಿವಾಸಿಗಳ ವ್ಯಥೆಗೂ ನಮ್ಮ ವ್ಯಥೆಗೂ ಸಮಾನತೆಯಿದೆ. ಈ ಮಾತು ಅಮೆರಿಕ ದೇಶಕ್ಕೂ ಅನ್ವಯಿಸುವಂಥದ್ದು. ನಮ್ಮ ಸಮಸ್ಯೆ ಬೇರೆ ಬೇರೆಯಾಗಿರಬಹುದು. ಆದರೆ, ಪರಿಪ್ರೇಕ್ಷ್ಯ ಒಂದೇ. ನಮ್ಮ ವ್ಯಥೆ, ನಮ್ಮ ಪ್ರಶ್ನೆ ಒಂದೇ ರೀತಿಯಾಗಿದೆ. ಅವರು ಮಾಡಿದ ಆಂದೋಲನವು ಅಮೆರಿಕದ ಚುನಾವಣೆಯ ಮೇಲೂ ಪ್ರಭಾವ ಬೀರಿದೆ. ನಮಗೆ 'ಅಶ್ವೇತ' (ಕರಿಯರ) ಸಮುದಾಯದವರಿಂದಲೂ ಸಾಕಷ್ಟು ಪ್ರೇರಣೆ ಸಿಕ್ಕಿದೆ. ನಮ್ಮ ಪ್ರಶ್ನೆಗೂ, ಅವರ ಪ್ರಶ್ನೆಗೂ ಸಂಬಂಧವಿದೆ.

◆ **ಅಂದರೆ ಅಲ್ಲಿ ವರ್ಣ ಭೇದವಿದೆ, ಇಲ್ಲಿ ಜಾತಿ ಭೇದವಿದೆ ಅಂತೀರಾ?**

ಹೌದೌದು, ಖಂಡಿತ. ನಮ್ಮ ದೇಶ, ಭಾಷೆ, ಸಂಸ್ಕೃತಿಯು ಬೇರೆ ಬೇರೆಯಾಗಿದ್ದರೂ, ನಮ್ಮ ವ್ಯಥೆ ಮಾತ್ರ ಒಂದೇ. ಇದೆಲ್ಲವೂ ನಮ್ಮ ಮಾನವ ಹಕ್ಕಿಗೆ ಸಂಬಂಧಿಸಿದ್ದು, ನಮ್ಮ ನಡುವೆ ಸೊಲಿಡಾರಿಟಿ ನಿರ್ಮಾಣವಾಗಿದೆ.

◆ **ನಿಮ್ಮ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು ಇರಲಿಲ್ಲ. ಆಗ ನೀವು ಜನರೊಂದಿಗೆ ಹೊಂದಿದ ಸಂಬಂಧ ಹೇಗಿತ್ತು?**

ಅದೆಂಥ ಕಾಲವಾಗಿತ್ತೆಂದರೆ, ನಮ್ಮನ್ನು ಆಗ ಅಸ್ಪೃಶ್ಯ ಲೇಖಕರೆಂದೇ ಭಾವಿಸಲಾಗುತ್ತಿತ್ತು. ನಮ್ಮ ದಲಿತ ಸಾಹಿತ್ಯಕ್ಕೆ ಪ್ರಕಾಶಕರು ಸಿಗುತ್ತಿರಲಿಲ್ಲ. ಜನರು ಅನ್ನುತ್ತಿದ್ದರು, ಇದೆಂಥ ಸಾಹಿತ್ಯ? ಇದರಲ್ಲಿ ಬರೇ ಅಶ್ಲೀಲತೆಯಿದೆ, ಬಯ್ಗುಳು ಇದೆ. ಇದು ನಿರುಪಯುಕ್ತ ಸಾಹಿತ್ಯವೆಂದು ಹೀಗಳೆಯುತ್ತಿದ್ದರು.



"ನಮ್ಮ ದೇಶದ ಮುಖದ ಮೇಲೆ ಇಂದಿಗೂ ಜಾತಿಯತೆಯ ದೊಡ್ಡ ದೊಡ್ಡ ಕಲೆಗಳಿವೆ. ಈ ಕಲೆಗಳನ್ನು ಅಳಿಸಿದಾಗಲೇ ದೇಶವು 'ಮಹಾನ್' ಆಗುವುದು ಸಾಧ್ಯ. ಎಲ್ಲರೂ ಸೇರಿಯೇ ರಾಷ್ಟ್ರವನ್ನು ಶ್ರೇಷ್ಠವನ್ನಾಗಿ ಮಾಡುವುದು ಸಾಧ್ಯ. ಎಲ್ಲರೂ ಸಮಾನರಾದಾಗಲೇ ದೇಶ ಶ್ರೇಷ್ಠವಾಗಬಲ್ಲದು.